ಪಶು ಚಿಕಿತ್ಸಾ ಕೇಂದ್ರಗಳಿಗೆ ನೇಮಕಾತಿ

760 (1411) ಶ್ರೀ ಖಾದರ್. ಯು.ಟಿ. (ಮಂಗಳೂರು) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆವಿಗೂ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಪಶುಚಿಕಿತ್ಸಾ ಘಟಕ / ಕೇಂದ್ರ / ಆಸ್ಪತ್ರೆಗಳ ವಿವರ ಒದಗಿಸುವುದು;

ಆ) ಹಾಗಿದ್ದಲ್ಲಿ, ಈ ಘಟಕಗಳಲ್ಲಿ ಯಾವ ಹುದ್ದೆಗಳು ಖಾಲಿ ಇರುತ್ತದೆ; ಇವುಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಪಶುಚಿಕಿತ್ಸಾ ಘಟಕ / ಕೇಂದ್ರ / ಆಸ್ಪತ್ರೆಗಳ ವಿವರ ಈ ಕೆಳಕಂಡಂತಿದೆ:

1	ಪಶುಆಸ್ಪತ್ರೆ	13
2	ಸಂಚಾರಿ ಪಶುಚಿಕಿತ್ಸಾಲಯ	05
3	ಪಶುಚಿಕಿತ್ಸಾಲಯ	35
4	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ	48
5	ಕೃತಕ ಗರ್ಭಧಾರಣಾ ಕೇಂದ್ರ	07
6	ಪ್ರಧಾನ ಗ್ರಾಮೀಣ ಯೋಜನೆ	01
7	ಪ್ರಧಾನ ಗ್ರಾಮೀಣ ಯೋಜನೆ ಉಪಕೇಂದ್ರ	06
8	ಜಿಲ್ಲಾ ಕೋಳಿ ಸಾಕಾಣಿಕಾ ಮತ್ತು ತರಬೇತಿ ಕೇಂದ್ರ	01
9	ದೊಡ್ಡ ರೋಗ ನಿವಾರಣ ಯೋಜನೆ	01
10	ದೊಡ್ಡರೋಗ ತನಿಖಾ ಠಾಣೆ	01
11	ಪುಲ್ಲೋರಂ ನಿಯಂತ್ರಣ ಘಟಕ	01
12	ನಾಯಿ ಹುಚ್ಚು ನಿಯಂತ್ರಣಾ ಘಟಕ	01
	ಒಟ್ಟು:	**120**

ಆ) ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತಿದೆ:

1	ಪಶುವೈದ್ಯಾಧಿಕಾರಿ	26
2	ಹಿರಿಯ ಪಶುಪರೀಕ್ಷಕರು	35
3	ಪಶುವೈದ್ಯಕೀಯ ಪರೀಕ್ಷಕರು	30
4	ಪಶುವೈದ್ಯಕೀಯ ಸಹಾಯಕರು	46
5	ಕಚೇರಿ ಅಧೀಕ್ಷಕರು	01
6	ಪ್ರಥಮ ದರ್ಜೆ ಸಹಾಯಕರು	01
7	ವಾಹನ ಚಾಲಕರು	04
8	ಡಿ–ದರ್ಜೆ ನೌಕರರು	102
	ಒಟ್ಟು:	**245**

ಖಾಲಿ ಹುದ್ದೆಗಳನ್ನು ತುಂಬಲು ಕೆಳಕಂಡಂತೆ ಕ್ರಮ ತೆಗೆದು ಕೊಳ್ಳಲಾಗುವುದು.

1. ಪಶುವೈದ್ಯಾಧಿಕಾರಿ : ವಿಶೇಷ ನೇಮಕಾತಿ ನಿಯಮಗಳ ಮೂಲಕ ಇಲಾಖೆಯಲ್ಲಿ ಖಾಲಿ ಇರುವ 487 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಜಾರಿಯಲ್ಲಿದ್ದು, ನೇಮಕಾತಿ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

2. ಹಿರಿಯ ಪಶುವೈದ್ಯ ಪರೀಕ್ಷಕರು : ಪಶುವೈದ್ಯ ಪರೀಕ್ಷಕರ ಹುದ್ದೆಯಿಂದ ಹಿರಿಯ ಪಶುವೈದ್ಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ಮುಂಬಡ್ತಿ ನೀಡುವ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

3. ಪಶುವೈದ್ಯ ಪರೀಕ್ಷಕರು : 300 ಪಶುವೈದ್ಯ ಪರೀಕ್ಷಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಆಯ್ಕೆ ಮಾಡಲಾಗಿದ್ದು, ನೇಮಕಾತಿ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗುವುದು.

4. ಪಶುವೈದ್ಯ ಸಹಾಯಕರು : ನೇರ ನೇಮಕಾತಿ ಮೂಲಕ 642 ಪಶುವೈದ್ಯ ಸಹಾಯಕರ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿದ್ದು, ನೇಮಕಾತಿ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

5. ಕಛೇರಿ ಅಧೀಕ್ಷಕರು : ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಮುಂಬಡ್ತಿ ನೀಡುವ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಕಛೇರಿ ಅಧೀಕ್ಷಕರ ಹುದ್ದೆಗಳನ್ನು ತುಂಬಲು ಕ್ರಮವಹಿಸ ಲಾಗುವುದು.

6. ಪ್ರಥಮ ದರ್ಜೆ ಸಹಾಯಕರು : ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಿಂದ ಮುಂಬಡ್ತಿ ನೀಡುವಾಗ ಮತ್ತು ನೇರ ನೇಮಕಾತಿ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗುವುದು.

7. ವಾಹನ ಚಾಲಕರು : ದಕ್ಷಿಣ ಕನ್ನಡ ಜಿಲ್ಲಾ ಉಪನಿರ್ದೇಶಕರಿಂದ ಹೊರ ಗುತ್ತಿಗೆ ಮುಖಾಂತರ ಹಾಗೂ ಎಸ್.ಎಸ್.ಎಲ್.ಸಿ. ಪಾಸು ಮಾಡಿರುವ ಮತ್ತು ವಾಹನ ಚಾಲನೆ ತರಬೇತಿ ಪಡೆದಿರುವ ಡಿ–ದರ್ಜೆ ನೌಕರರಿಗೆ ಮುಂಬಡ್ತಿ ನೀಡುವ ಮೂಲಕ ಜಿಲ್ಲೆಯಲ್ಲಿ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

8. ಡಿ–ದರ್ಜೆ ನೌಕರರು : ಹೊರ ಗುತ್ತಿಗೆ ಆಧಾರದ ಮೇಲೆ ದಕ್ಷಿಣ ಕನ್ನಡ ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ಜಿಲ್ಲೆಯಲ್ಲಿ ಖಾಲಿ ಇರುವ 'ಡಿ ದರ್ಜೆ' ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗುವುದು.